ಓ.ಎಸ್. ನಂಃ **1/2025**
ಪಿ.ಡಬ್ಲ್ಯೂಃ **1**

ದಿನಾಂಕ **12-02-2026** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ವಾದಿಯ ಪರ: ಶ್ರೀ ಆರ್.ಸಿ. ಎಸ್ ವಕೀಲರಿಂದಃ

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ರೂಪದಲ್ಲಿ ಸಲ್ಲಿಸುತ್ತಿದ್ದು ಅದನ್ನು ನನ್ನ ಮಾಹಿತಿ ಮೇರೆಗೆ ನನ್ನ ವಕೀಲರು ತಯಾರಿಸಿರುತ್ತಾರೆ. ಅದರಲ್ಲಿ ಬರೆದಿರುವ ಸಂಗತಿಗಳು ನಿಜ ಇರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ದಿನಾಂಕ 17.09.2010 ರ ವಿಕ್ರಯ ಪತ್ರವನ್ನು ನಿಪಿ-1 ಹಾಗೂ ಅದರೊಂದಿಗಿನ ನಕಾಶೆಯನ್ನು ನಿಪಿ-2, ದಿನಾಂಕ 23.12.2010 ರ ಖಾತಾ ವರ್ಗಾವಣೆ ಆದೇಶ ಪತ್ರವನ್ನು ನಿಪಿ-3, ಖಾತಾ ವರ್ಗಾವಣೆ ಶುಲ್ಕ ಪಾವತಿ ರಸೀದಿಯನ್ನು ನಿಪಿ-4, 09 ಕಂದಾಯ ಪಾವತಿ ರಸೀದಿಗಳನ್ನು ನಿಪಿ-5 ರಿಂದ 14, ಒಂದು ಪಹಣಿ ಪತ್ರಿಕೆಯನ್ನು ನಿಪಿ-15, ದಿನಾಂಕ 09.08.2011 ರ ಖರೀದಿ ಪತ್ರದ ದೃಡೀಕೃತ ನಕಲು ಪ್ರತಿಯನ್ನು ನಿಪಿ-16, ದಿನಾಂಕ 01.08.2023 ರ ವಿಭಾಗ ಪತ್ರದ ದೃಡೀಕೃತ ನಕಲು ಪ್ರತಿಯನ್ನು ನಿಪಿ-17 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ